

ಡಾ.ವಿನೋದ ಛೆಬ್ಬಿ

**ಆರಾಮವಾಗಿ ಕಾಮಸುಖ ಅನುಭವಿಸುವವರು ಗರ್ಭಧಾರಣೆಗೆ ಒತ್ತಾಯ ಬರುವಾಗ ಕಾಮಾಸಕ್ತಿ ಏಕೆ ಕಳೆದುಕೊಳ್ಳುತ್ತಾರೆ?**

# 104: ಎಲ್ಲೆಲ್ಲೂ ಸ್ವಚ್ಛಂದತೆ

ಅಂಗದ್-ಅಮಲಾ ದಂಪತಿಯ ಕುರಿತು ಮಾತಾಡುತ್ತಿದ್ದೇವೆ. ಅಂಗದನಲ್ಲಿ ವೈಯಕ್ತಿಕ ಸ್ವಾತಂತ್ರ್ಯದ ಅರಿವನ್ನು ಮೂಡಿಸಲು "ಉದ್ದೇಶವಿಲ್ಲದೆ ಬೀದಿ ಸುತ್ತಲು" ಕಳಿಸಿದ್ದೆ. ಹಾಗೆ ಹೋದವನು ಮರಳಿ, ತಡವಾದುದಕ್ಕೆ ಅತೀವ ವಿಷಾದ ವ್ಯಕ್ತಪಡಿಸಿದ ಎಂದು ಹೋದಸಲ ಹೇಳಿದನಷ್ಟೆ?

ಅಂಗದನ ವಿಷಾದತೆಯನ್ನು ಒಪ್ಪುವ ಬದಲು, ಅವನು ಸ್ವೇಚ್ಛೆಯಿಂದ ತೆಗೆದುಕೊಂಡ ಸಮಯ ಸ್ವಾತಂತ್ರ್ಯವನ್ನು ಎತ್ತಿ ತೋರಿಸಿ, ನಂತರ ಅವನ ಅನುಭವ ಕೇಳಿದೆ. ಅಂಗದ ಅನಿಸಿಕೆಗಳನ್ನು ಕ್ರೋಢೀಕರಿಸಲು ಸಮಯ ತೆಗೆದುಕೊಂಡ.

'ಹೊರಗೆ ಕಾಲಿಟ್ಟ ತಕ್ಷಣ ಏನು ಮಾಡುವುದೆಂದು ತಿಳಿಯಲಿಲ್ಲ. ಮೆಸೇಜ್ ಚೆಕ್ ಮಾಡೋಣ ಎಂದರೆ ಮೊಬೈಲ್ ಇಲ್ಲೇ ಬಿಟ್ಟಿದ್ದೆ. ಖಾಲಿಖಾಲಿ ಎನ್ನಿಸಿತು. ಏನೂ ಮಾಡುವುದು ಬೇಡ ಎನ್ನಿಸಿತು. ಮನೆಯಲ್ಲಿದ್ದರೆ ಮಲಗಬಹುದಾಗಿತ್ತು, ಬೀದಿಯಲ್ಲಿ ಏನು ಮಾಡುವುದು? ಕೆಲಸವಿಲ್ಲದೆ ಬೀದಿ ಸುತ್ತುವುದೆ? ಸಮಯ ವ್ಯರ್ಥ ಎನ್ನಿಸಿತು. ನೀವು ಹೇಳಿದ್ದರಿಂದ ಏನೋ ಉದ್ದೇಶ ಇರಬೇಕು ಎಂದು ಸುಮ್ಮನೆ ಹೊರಟೆ. ಎಲ್ಲಿಗೆ ಹೋಗಬೇಕೆಂದು ಗೊತ್ತಾಗಲಿಲ್ಲ. ಉದ್ದೇಶವಿಲ್ಲದೆ ಹೋಗುವುದೇ ನನ್ನ ಉದ್ದೇಶ ಅಲ್ಲವಾ ಅಂತ ನಗುಬಂತು. ಹೋಗುವುದರ ಬದಲು ನಡೆಯುವುದು, ತಿರುಗುವುದು ಎಂದುಕೊಂಡೆ. ಈ ರಾಜಾಜಿನಗರ ನನಗೆ ಹೊಸದು. ನೋಡೋಣ ಎಂದು ಸುಮ್ಮನೆ ನಡೆದೆ. ಇಲ್ಲಿ ಹೆಚ್ಚಾಗಿ ಮನೆಗಳೇ ಇವೆ. ಒಂದು ಕಿಲೋಮೀಟರ್ ನಡೆದಿರಬಹುದು. ಒಂದು ಕಂಪೌಂಡ್ ಒಳಗೆ ಜರ್ಮನ್ ಶೆಪರ್ಡ್ ನಾಯಿ ಇತ್ತು. ಸಿಕ್ಕಾಪಟ್ಟೆ ಬೊಗಳತಿತ್ತು. ಹತ್ತಿರ ಹೋಗುವುದು ಬೇಡ ಎನ್ನಿಸಿತು. ಇನ್ನೊಂದು ಮನೆಯ ಮುಂದೆ ನಾಯಿಯಿತ್ತು. ಪಾಮರೇನಿಯನ್. ಹತ್ತಿರ ಹೋದರೆ ಬಾಲ ಅಲ್ಲಾಡಿಸಿ ಕುಯ್ಗುಟ್ಟಿತು. ಮುಟ್ಬೋ ಮನಸ್ಸಾಯಿತು. ರೇಬೀಸ್ ಜರ್ಮ್ಸ್ ಇರಬಹುದೆ ಎಂದುಕೊಂಡೆ. ಸಾಕುನಾಯಿಗೆ ವ್ಯಾಕ್ಸೀನ್ ಕೊಟ್ಟೇ ಇರುತ್ತಾರೆ ಅಂತ ಧೈರ್ಯ ಮಾಡಿ ಗೇಟಿನೊಳಗೆ ಕೈಹಾಕಿ ನಾಯಿಯನ್ನು ಮುಟ್ಟಿದೆ. ಅದು ನನ್ನ ಕೈಯನ್ನು ಮೂಸಿ ನೆಕ್ಕಿತು! ಸುಮಾರು ಹೊತ್ತು ನೆಕ್ಕುತ್ತಲೇ ಇತ್ತು!' ಬಾಲಕನ ಉತ್ಸಾಹ ಕಾಣುತ್ತಿತ್ತು. 'ಇಬ್ಬರು ಹುಡುಗರು ಯುನಿಫಾರ್ಮ್ ಹಾಕಿಕೊಂಡು ಕಲ್ಲುಸೇತುವೆಯ ಮೇಲೆ ಕಾಲು ಅಲ್ಲಾಡಿಸುತ್ತ ಕುಳಿತಿದ್ದರು. ಮೆತ್ತಗೆ ಅವರ ಎದುರು ಕೂತು ಅವರ ಮಾತು ಕೇಳಿಸಿಕೊಂಡೆ. ಹೋಂವರ್ಕ್ ಮಾಡಿರಲಿಲ್ಲ, ಹಾಗಾಗಿ ಸ್ಕೂಲಿನಲ್ಲಿ ಶಿಕ್ಷೆ ತಪ್ಪಿಸಿಕೊಳ್ಳಬೇಕು ಎಂದು ಕುಳಿತಿದ್ದರು. ಕೊನೆಗೆ ನೋಟ್‌ಬುಕ್ ತೆಗೆದು ಟಿಕ್-ಟಾಕ್-ಟೋ ಆಡಲು ಶುರುಮಾಡಿದರು. ನನ್ನ ಸ್ಕೂಲ್ ನೆನಪಾಯಿತು. ನಾನು ಯಾವೊತ್ತೂ ಹೀಗೆ ಸ್ಕೂಲ್ ಬಂಕ್ ಮಾಡಿರಲಿಲ್ಲ. ಬಂಕ್ ಮಾಡಿದರೆ ಎಷ್ಟು ಎಕ್ಸೈಟಿಂಗ್ ಆಗಿರೋದು ಎನ್ನಿಸ್ತು... ಒಂಥರಾ ಹೊಸಾ ಎಕ್ಸ್‌ಪೀರಿಯನ್ಸ್' ಹೀಗೆ ಸುಮಾರು ಹೊತ್ತು ಉತ್ಸುಕತೆಯಿಂದ ಹೇಳಿಕೊಂಡ. ಅವನು ಮುಗಿಸಿದಮೇಲೆ ನಾನು ಮಾತಾಡಿದೆ.

'ಅಂಗದ್, ನಿಮ್ಮ ಅನುಭವ ಹೊಸದು ಆಗಿದ್ದಂತೆ ರೋಚಕವೂ ಆಗಿತ್ತಲ್ಲವೆ? ಬಹಳ ಸಂತೋಷ... ಅದು ಸರಿ, ನೀವು ನಾಯಿಯ ಬಗೆಗೆ ಹೇಳುವಾಗ ನಾಯಿಯ ಜಾತಿಯ ಹೆಸರೂ ಹೇಳಿದಿರಿ. ನಿಮಗೆ ನಾಯಿಗಳ ಬಗೆಗೆ ವಿಶೇಷ ಆಸಕ್ತಿ ಇರುವುದು ಎದ್ದುಕಾಣುತ್ತಿದೆ.'

'ಹೌದು! ನನಗೆ ಮೊದಲಿನಿಂದಲೂ ನಾಯಿ ಅಂದರೆ ತುಂಬಾ ಪ್ರೀತಿ...' ಎಂದು ಮುಖ ಸಪ್ಪಗೆ ಮಾಡಿ ಮುಂದುವರಿಸಿದ. 'ಎರಡನೆ ಕ್ಲಾಸಿನಲ್ಲಿ ಇರಬೇಕಾದರೆ ಸ್ನೇಹಿತನ ನಾಯಿ ಮರಿಹಾಕಿತ್ತು. ಲ್ಯಾಬ್ರಡಾರ್. ತುಂಬಾ ಮುದ್ದಾಗಿತ್ತು. ಮನೆಗೆ ತಂದೆ. ಎರಡು ದಿನ ಆಟ ಆಡಿದೆ. ನಂತರ ಅಮ್ಮ ನನ್ನಓದಿಗೆ ಅಡ್ಡಿಯಾಗುತ್ತದೆ ಎಂದು ತಲೆಯ ಮೇಲೆ ಕೂತುಕೊಂಡಳು. ವಾಪಸ್ ಕೊಟ್ಟೆ." ಕೆಲವು ಕ್ಷಣ ತಲೆಬಗ್ಗಿಸಿದ . 'ಈಗ ಸ್ನೇಹಿತರ ಮನೆಗಳಿಗೆ ಹೋದಾಗಲೆಲ್ಲ ಅವರ ನಾಯಿಯ ಜೊತೆಗೆ ಸಖತ್ತಾಗಿ ಆಟ ಆಡ್ತಾ ಇರ್ತೇನೆ.'

'ಅಷ್ಟೇಕೆ, ನೀವೇ ಒಂದು ನಾಯಿಯನ್ನು ಸಾಕಬಹುದಲ್ಲವೆ?' ಎಂದು ಉತ್ತರ ಗೊತ್ತಿರುವ ಪ್ರಶ್ನೆ ಕೇಳಿದೆ. ಹೌದು, ಈ ವಿಚಾರ ಬಂದಿತ್ತು, ಆದರೆ ಹೆಚ್ಚಿನ ಜವಾಬ್ದಾರಿಗೆ ಸಮಯವಿಲ್ಲ ಎಂದು ಕೈಬಿಟ್ಟೆ ಎಂದ. ಒಂದುವೇಳೆ ಸಮಯ ಸಾಕಷ್ಟಿದ್ದರೆ ಎಂದು ಕೆದಕಿದಾಗ, ಆದರೂ ಮನಸ್ಸಿಲ್ಲ ಎನ್ನುವಂತೆ ಹೇಳಿದ. ಅವನ ಉತ್ತರದಿಂದ ನನ್ನ ಅನಿಸಿಕೆಗೆ ಇನ್ನಷ್ಟು ಪುಷ್ಟಿ ದೊರಕಿತು. ಅದೇನು?

ಅಂಗದನು ನಾಯಿಯೊಡನೆ ಕಾಲಕಳೆಯುವುದಕ್ಕೂ, ಕಾಮಕೂಟದಲ್ಲಿ ಭಾಗವಹಿಸುವುದಕ್ಕೂ ಒಂದೇ ಮೂಲಕಾರಣವಿದೆ.

ಅವನು ನಾಯಿಯ ಒಡನಾಟದಲ್ಲಿ ಸ್ವಚ್ಛಂದದಿಂದ ತೊಡಗುವಾಗ ರೋಚಕತೆಗೆ ತೆರೆದುಕೊಳ್ಳುತ್ತಾನೆ – ಆದರೆ ಬದ್ಧತೆ ಅಥವಾ ಜವಾಬ್ದಾರಿ ಇಲ್ಲದಿದ್ದರೆ ಮಾತ್ರ. ಒಂದುವೇಳೆ ಬದ್ಧತೆ, ಜವಾಬ್ದಾರಿ ಬಂದರೆ ಕರ್ತವ್ಯದ ನಿರ್ವಹಣೆ ತಲೆಯೆತ್ತಿ, ಸ್ವಚ್ಛಂದತೆ ಮಾಯವಾಗಿ ರೋಚಕತೆ ಹುಟ್ಟುವುದಿಲ್ಲ. ಇದೇ ಪ್ರಕ್ರಿಯೆ ಅವನ ಕಾಮಕ್ರಿಯೆಯಲ್ಲೂ ನಡೆಯುತ್ತದೆ. ಒಬ್ಬನೇ ಸ್ವಚ್ಛಂದತೆಯಿಂದ ಪ್ರಣಯದ ಚಿತ್ರಗಳನ್ನು ವೀಕ್ಷಿಸುತ್ತಿದ್ದರೆ ಕಾಮ ಕೆರಳುತ್ತ ರೋಚಕತೆ ಅನುಭವಿಸುತ್ತಾನೆ. ಆದರೆ ಸಂಗಾತಿಯೊಂದಿಗೆ ಪ್ರಣಯಕೂಟದ ಜವಾಬ್ದಾರಿ ಹೊರುವಾಗ ಕರ್ತವ್ಯದ ನಿರ್ವಹಣೆಯ ಭರದಲ್ಲಿ ಸ್ವಚ್ಛಂದತೆ ಮಾಯವಾಗಿ ರೋಚಕತೆ ಹುಟ್ಟುವುದಿಲ್ಲ. ಎರಡೂ ಸಂದರ್ಭಗಳಲ್ಲಿ ಜವಾಬ್ದಾರಿ ಇಲ್ಲದಿದ್ದರೆ ಸ್ವಚ್ಛಂದತೆ ರಾರಾಜಿಸುತ್ತದೆ; ಜವಾಬ್ದಾರಿ ಹೊತ್ತರೆ ಸ್ವಚ್ಛಂದತೆ ಮಾಯವಾಗಿ ಕರ್ತವ್ಯ ರಾರಾಜಿಸುತ್ತದೆ. (ಈ ಕಾರಣದಿಂದಲೇ ಆರಾಮವಾಗಿ ಸಂಭೋಗ ಸುಖ ಅನುಭವಿಸುವವರು ಗರ್ಭಧಾರಣೆಯ ಒತ್ತಾಯ ಬರುವಾಗ ಕಾಮಾಸಕ್ತಿ ಕಳೆದುಕೊಳ್ಳುತ್ತಾರೆ.)

ಈ ವಿಷಯದ ಕುರಿತು ಅಂಗದ್– ಅಮಲಾ ದಂಪತಿಯೊಡನೆ ವಿಶದವಾಗಿ ಚರ್ಚಿಸಿದೆ. ಇನ್ನೊಬ್ಬರಿಗೋಸ್ಕರ ಬದುಕಬೇಕೆನ್ನುವಾಗ ಸ್ವೇಚ್ಛೆಯ ಬಯಕೆ ಹೇಗೆ ಹಿಂದೆ ಸರಿಯುತ್ತದೆ, ಆಗ ಸ್ವಂತಿಕೆ ಹೇಗೆ ಮೂಲೆಗುಂಪಾಗುತ್ತಿದೆ ಎಂಬುದನ್ನು ವಿವರಿಸಿದೆ. ನಂತರ ಅಮಲಾಳನ್ನು ಉದ್ದೇಶಿಸಿ ಕೇಳಿದೆ. 'ಅಮಲಾ, ಇದರಿಂದ ಹೊರಗೆ ಬರುವುದು ಹೇಗೆ ಎಂದು ಕೇಳಿದಿರಷ್ಟೆ?' ಆಕೆ ಹೌದೆಂದಳು. 'ಹೊರಬರುವುದರ ಬಗೆಗೆ ಏನಾದರೂ ಮಾಡುವುದಕ್ಕಿಂತ ಮುಂಚೆ ನಿಮಗೊಂದು ಪ್ರಶ್ನೆ ಕೇಳುತ್ತೇನೆ. ಯೋಚಿಸಿ ಉತ್ತರಿಸಿ. ಅಂಗದ್ ಇದರಿಂದ ಹೊರಗೆ ಬಂದರೆ ಪರಿಣಾಮ ಏನಾಗಬಹುದು?' ಆಕೆ ಥಟ್ಟನೆ ಉತ್ತರಿಸಿದಳು. 'ಅವನು ಸೆಕ್ಸ್‌ನಲ್ಲಿ ಮನಸ್ಸಿಟ್ಟು ಭಾಗವಹಿಸುತ್ತಾನೆ. ತಾನೇ ಶುರುಮಾಡುತ್ತಾನೆ. ಇಬ್ಬರೂ ಎಂಜಾಯ್ ಮಾಡುತ್ತೇವೆ. ನನಗೆ ತೃಪ್ತಿಯಾಗುತ್ತದೆ ಎನ್ನಿಸುತ್ತದೆ. ನನಗೆ ಬೇಕಾದುದೆಲ್ಲ ಸಿಗುತ್ತದೆ. ಅದನ್ನೇ ನಾನೂ ಬಯಸುವುದು.' ಎರಡಕ್ಕೆ ಎರಡನ್ನು ಸೇರಿಸಿದರೆ ನಾಲ್ಕಲ್ಲದೆ ಇನ್ನೇನು ಬರುತ್ತದೆ ಎನ್ನುವಂತಿತ್ತು ಆಕೆಯ ಮುಖಭಾವ.

ಅಮಲಾಳ ಲೆಕ್ಕಾಚಾರ ಎಲ್ಲಿ ತಪ್ಪಿತ್ತು ಎಂದು ಮುಂದಿನ ಸಲ ಹೇಳುತ್ತೇನೆ.

ಉಚಿತ ಸಹಾಯವಾಣಿಗೆ ಪ್ರತಿ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: 8050255229 (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: 8494944888 (ಬೆಳಿಗ್ಗೆ 11ರಿಂದ ಸಂಜೆ 5ರ ತನಕ) ಲೇಖಕರ ವಿಳಾಸ: www.medisex.org